**Ministry of Communication and IT joins hands with MSDE**

# ಕೌಶಲ ಅಭಿವೃದ್ಧಿಗೆ ₹6 ಲಕ್ಷ ಕೋಟಿ

## ಐದು ವರ್ಷಗಳಲ್ಲಿ 24 ಲಕ್ಷ ಜನರಿಗೆ ತರಬೇತಿ - ಉದ್ಯೋಗಾವಕಾಶ ಸೃಷ್ಟಿ

ನವದೆಹಲಿ (ಪಿಟಿಐ): ದೇಶದ ಕೋಟ್ಯಂತರ ಯುವಜನರ ಉದ್ಯೋಗ ಪಡೆದುಕೊಳ್ಳಲು ಅರ್ಹರಾಗುವಂತೆ ಮಾಡಲು ಅಗತ್ಯವಾದ ತರಬೇತಿಯನ್ನು ನೀಡಲು ಕೇಂದ್ರ ಸರ್ಕಾರಕ್ಕೆ ₹6 ಲಕ್ಷ ಕೋಟಿ ಹಣ ವೆಚ್ಚವಾಗುತ್ತದೆ ಎಂದು ಕೌಶಲ ಅಭಿವೃದ್ಧಿ ಖಾತೆ ರಾಜ್ಯ ಸಚಿವ ರಾಜೀವ್ ಪ್ರತಾಪ್ ರೂಡಿ ಹೇಳಿದರು.

ಇಲ್ಲಿ ಗುರುವಾರ ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆಯ ಯಶಸ್ಸಿಗಾಗಿ ಮೊಬೈಲ್ ಫೋನ್ ಪ್ರಚಾರ ಅಭಿಯಾನಕ್ಕೆ ಚಾಲನೆ ನೀಡಿದ ಅವರು, ಯಾವ ದೇಶವು ನುರಿತ ಮಾನವ ಸಂಪನ್ಮೂಲವನ್ನು ಹೊಂದಿರುತ್ತದೆಯೋ ಆ ದೇಶದಲ್ಲಿನ ತಲಾವಾರು ಆದಾಯವೂ ಹೆಚ್ಚೇ ಇರುತ್ತದೆ ಎಂದರು.

ಶಿಕ್ಷಣ ಬಹಳ ಮುಖ್ಯ. ಆದರೆ, 12 ವರ್ಷಗಳ ಶಿಕ್ಷಣ ಎಲ್ಲರನ್ನೂ ಉದ್ಯೋಗಕ್ಕೆ ಅರ್ಹರನ್ನಾಗಿಸುವುದಿಲ್ಲ. 12 ವಾರಗಳ ಕೌಶಲ ಅಭಿವೃದ್ಧಿ ತರಬೇತಿಯು ಎಲ್ಲರನ್ನೂ ಉದ್ಯೋಗ ಪಡೆದುಕೊಳ್ಳಲು ಸಮರ್ಥರನ್ನಾಗಿಸುತ್ತದೆ ಎಂದರು.




ನವದೆಹಲಿಯಲ್ಲಿ ಗುರುವಾರ ನಡದ ಕಾರ್ಯಕ್ರಮದಲ್ಲಿ ಕೇಂದ್ರ ಸಂಪರ್ಕ ಮತ್ತು ಐ.ಟಿ ಖಾತೆ ಸಚಿವ ರವಿಶಂಕರ ಪ್ರಸಾದ್ ಹಾಗೂ ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆ ರಾಜ್ಯ ಸಚಿವ ರಾಜೀವ್ ಪ್ರತಾಪ್ ರೂಡಿ ಅವರು 'ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ'ಯ ಮೊಬೈಲ್ ಫೋನ್ ಮೂಲಕದ ಪ್ರಚಾರ ಅಭಿಯಾನಕ್ಕೆ ಚಾಲನೆ ನೀಡಿದರು **ಪಿಟಿಐ ಚಿತ್ರ**

ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆಯಡಿ ದೇಶದ ಜನರಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡಲಾಗುವುದು. ಆ ಮೂಲಕ ಅವರೆಲ್ಲರಿಗೂ ಸೂಕ್ತ ಉದ್ಯೋಗ ದೊರಕುವಂತೆ ಮಾಡಲಾಗುವುದು. ಇದಕ್ಕಾಗಿ ಮುಂದಿನ ಐದು ವರ್ಷಗಳ ಅವಧಿಗೆ ಕೇಂದ್ರ ಸರ್ಕಾರ ₹6 ಲಕ್ಷ ಕೋಟಿಗಳನ್ನು ವಿನಿಯೋಗಿಸಬೇಕಾಗುತ್ತದೆ ಎಂದು ವಿವರಿಸಿದರು.

ರಾಷ್ಟ್ರೀಯ ಕೌಶಲ ದಿನಾಚರಣೆಯಂದು (ಜುಲೈ 15) 'ರಾಷ್ಟ್ರೀಯ ಕೌಶಲ ಯೋಜನೆ' ಆರಂಭಿಸಲು ಯೋಜಿಸಲಾಗಿದೆ. ಇದು ಕೇಂದ್ರ ಸರ್ಕಾರದ ಮಹತ್ವಾಂಕ್ಷೆಯ ಯೋಜನೆಯಾಗಿದೆ. ಇದರಡಿ 24 ಲಕ್ಷ ಜನರಿಗೆ ತರಬೇತಿ ನೀಡಿ ಅವರಲ್ಲಿನ ಕೌಶಲವನ್ನು ಹೆಚ್ಚಿಸಲಾಗುವುದು. ಇದಕ್ಕೆ ದೇಶದ ವಾಣಿಜ್ಯೋದ್ಯಮ ವಲಯವು ಕೈಜೋಡಿಸಬೇಕಿದೆ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಸೆಲ್ಯುಲರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಸಿಒಎಐ) ಅಧ್ಯಕ್ಷರಾದ ಹಿಮಾಂಶು ಕಪಾನಿಯಾ, 2020ರ ವೇಳೆಗೆ ದೇಶದಾದ್ಯಂತ ಅಂತರ್ಜಾಲ ಸಂಪರ್ಕ ದೊರೆಯುವಂತೆ ಮಾಡಲು ಹೆಚ್ಚುವರಿಯಾಗಿ ₹5 ಲಕ್ಷ ಕೋಟಿಗಳ ಹೂಡಿಕೆ ಮಾಡಬೇಕಿದೆ ಎಂದರು.

**ದೇಶದ ದೂರ ಸಂಪರ್ಕ ಕ್ಷೇತ್ರವೇ ಮುಂದಿನ ಐದು ವರ್ಷಗಳಲ್ಲಿ 41 ಲಕ್ಷ ಉದ್ಯೋಗಗಳನ್ನು ಸೃಷಿಸಲಿದೆ.**

**ಹಿಮಾಂಶು ಕಪಾನಿಯಾ**

ಸಿಒಎಐ ಅಧ್ಯಕ್ಷರು